# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 392
ಉತ್ತರಿಸ ಬೇಕಾದ ದಿನಾಂಕ : 10.12.2025
ಸದಸ್ಯರ ಹೆಸರು : **ಶ್ರೀ ಕಿಶೋರ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
ಉತ್ತರಿಸುವ ಸಚಿವರು : **ಕಂದಾಯ ಸಚಿವರು**

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಅ) | 2013ನೇ ಸಾಲಿನಿಂದ ವಿತರಿಸುತ್ತಿರುವ 94 ಸಿ ಮತ್ತು 94 ಸಿಸಿ ಹಕ್ಕುಪತ್ರಗಳ ಫಲಾನುಭವಿಗಳಿಗೆ ಗ್ರಾಮ ಪಂಚಾಯತಿಗಳಲ್ಲಿ ನೇರವಾಗಿ ನಮೂನೆ 9 ಮತ್ತು 11ಎ ವಿತರಿಸಲಾಗುತ್ತಿತ್ತು. ಇತ್ತೀಚಿನ ಆದೇಶದ ಪ್ರಕಾರ ತಹಶೀಲ್ದಾರ್ ಕಛೇರಿಯ ಮೂಲಕ ಈ ಸ್ವತ್ತು ತಂತ್ರಾಂಶಕ್ಕೆ ಕಳುಹಿಸಲಾದ ಹಕ್ಕುಪತ್ರದ ಲಿಂಕ್ ಮೂಲಕ ನಮೂನೆ 9 ಮತ್ತು 11ಎ ಸೃಜಿಸುವಂತೆ ಆದೇಶ ಹೊರಡಿಸಲು ಕಾರಣವೇನು; ಸದರಿ ಆದೇಶ ನಂತರ ತಹಶೀಲ್ದಾರ್ ರವರು ಭೂಮಿ ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿ ಇಸ್ವತ್ತು ತಂತ್ರಾಂಶಕ್ಕೆ ರವಾನಿಸಿದ ಹಕ್ಕುಪತ್ರಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ದಿನಾಂಕ: 24.4.2025ರಂದು ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಪ್ರಕರಣ 94ಸಿ, 94ಸಿಸಿ ಹಾಗೂ 94ಡಿ ರಡಿಯಲ್ಲಿ ಭೂಮಿ ತಂತ್ರಾಂಶದಿಂದ ಸ್ವೀಕೃತವಾಗುವ ಹಕ್ಕುಪತ್ರಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು 11-ಎ ನೀಡಲು ಆದೇಶಿಸಲಾಗಿರುತ್ತದೆ.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತೆರಿಗೆ, ದರ ಮತ್ತು ಶುಲ್ಕಗಳು) ನಿಯಮ 2025ರಲ್ಲಿ ಈಗಾಗಲೇ ವಿತರಿಸಿರುವ ಕೈಬರಹದ ಹಕ್ಕುಪತ್ರಗಳಿಗೆ ಇ-ಸ್ವತ್ತು ನೀಡಲು ಅವಕಾಶ ಕಲ್ಪಿಸಲಾಗಿದೆ.<br><br>ಆದರೆ ಈಗಾಗಲೇ ವಿತರಿಸಲಾಗಿರುವ ಸದರಿ ಹಕ್ಕುಪತ್ರಗಳನ್ನು ಸೂಕ್ತ ರೀತಿಯಲ್ಲಿ ಡಿಜಿಟೈಸ್ ಮಾಡಿ ಗ್ರಾಮ ಪಂಚಾಯತ್ ಗಳಲ್ಲಿ ನಮೂನೆ 9ಮತ್ತು 11-ಎ ವಿತರಣೆಗೆ ಅನುಕೂಲವಾಗಲು ಸೂಕ್ತ ತಂತ್ರಾಂಶ ವ್ಯವಸ್ಥೆ ಕಲ್ಪಿಸುವ ಕುರಿತು ಪರಿಶೀಲಿಸಲಾಗುತ್ತಿದೆ. |
| ಆ) | ಸದರಿ ಆದೇಶದಿಂದ ಫಲಾನುಭವಿಗಳಿಗೆ ಗ್ರಾಮ ಪಂಚಾಯತಿಯಿಂದ ನಮೂನೆ 9 ಮತ್ತು 11ಎ ಸಿಗದೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇ-ಸ್ವತ್ತು 2.0 ತಂತ್ರಾಂಶದಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ. |
| ಇ) | 2023ರ ನಂತರ ವಿತರಿಸಿರುವ ಕೈಬರಹದ ಹಕ್ಕುಪತ್ರಗಳ ಪೈಕಿ ಗ್ರಾಮ ಪಂಚಾಯತ್‌ನಿಂದ ನಮೂನೆ 9 ಮತ್ತು 11ಎ ಸೃಜಿಸಿರುವ ಹಾಗೂ ಸೃಜಿಸಲು ಬಾಕಿ ಇರುವ ಅರ್ಜಿಗಳು ಎಷ್ಟು; | 2023ರ ನಂತರ ಇ-ಸ್ವತ್ತು ವರ್ಗೀಕರಣ ಪ್ರಕರಣ 94ಸಿ, 94ಸಿಸಿ ಹಾಗೂ 94ಡಿ ರಡಿಯಲ್ಲಿ ಸೃಜಿಸಿರುವ ನಮೂನೆ 9 ಮತ್ತು 11ಎ ವಿವರವನ್ನು ಅನುಬಂಧ-1ರಲ್ಲಿ ಮತ್ತು ಈಗಾಗಲೇ ಇ-ಸ್ವತ್ತು ವರ್ಗೀಕರಣ ಪ್ರಕರಣ 94-ಸಿ, 94-ಸಿಸಿ ಮತ್ತು 94- ಡಿ ರಡಿಯಲ್ಲಿ ಸೃಜಿಸಿರುವ ನಮೂನೆ 9 ಮತ್ತು 11ಎ ವಿವರವನ್ನು ಅನುಬಂಧ-2ರಲ್ಲಿ ನೀಡಿದೆ. |

| | | |
|---|---|---|
| ಈ | ಈಗಾಗಲೇ ವಿತರಿಸಿರುವ ಹಕ್ಕುಪತ್ರಗಳ ಪೈಕಿ ಎಷ್ಟು ಹಕ್ಕುಪತ್ರಕ್ಕೆ ಗ್ರಾಮ ಪಂಚಾಯತಿಯಿಂದ ಖಾತೆ ಆಗಿದೆ ಮತ್ತು ಎಷ್ಟು ಹಕ್ಕುಪತ್ರಗಳು ಖಾತೆಯಾಗಲು ಬಾಕಿ ಇದೆ: (ಜಿಲ್ಲಾವಾರು ವಿವರ ಒದಗಿಸುವುದು) | 2023ರ ನಂತರ ವಿತರಿಸಿರುವ ಕೈಬರಹದ ಹಕ್ಕುಪತ್ರಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇ-ಸ್ವತ್ತು ತಂತ್ರಾಂಶದಲ್ಲಿ ಅಳವಡಿಸಲು ಹಾಗೂ ನಮೂನೆ 9 ಮತ್ತು ನಮೂನೆ 11-ಎ ಸೃಜಿಸುವ ಬಗ್ಗೆ ಹಾಗೂ ಆನ್‌ಲೈನ್‌ನಲ್ಲಿ ಪ್ರಕ್ರಿಯೆಗೊಳಪಡಿಸುವ ಬಗ್ಗೆ ಪ್ರಸ್ತಾವನೆಯನ್ನು ಕಂದಾಯ ಇಲಾಖೆಯಲ್ಲಿ ಪರಿಶೀಲಿಸಲಾಗುತ್ತಿದೆ. |
| ಉ | 2023ರ ನಂತರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ 94 ಸಿ ಮತ್ತು 94 ಸಿಸಿ ಹಕ್ಕುಪತ್ರ ಕೋರಿ ಸಲ್ಲಿಕೆಯಾದ ಒಟ್ಟು ಅರ್ಜಿಗಳು ಎಷ್ಟು; ವಿತರಿಸಿದ ಹಕ್ಕುಪತ್ರಗಳು ಎಷ್ಟು: ಬಾಕಿ ಇರುವ ಅರ್ಜಿಗಳು ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು | ಸರ್ಕಾರದ ಸುತ್ತೋಲೆ ಆರ್.ಡಿ 152 ಎಲ್.ಜಿ.ಪಿ 2020 ದಿನಾಂಕ: 08.06.2021 ರಂತೆ ದಿನಾಂಕ: 31.03.2022 ರ ವರೆಗೆ 94ಸಿ ಮತ್ತು 94ಸಿಸಿ ಅರ್ಜಿಗಳನ್ನು ಸ್ವೀಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ತದನಂತರದ ದಿನದಿಂದ ಈವರೆಗೆ ಸದರಿ ಅರ್ಜಿಗಳನ್ನು ಸ್ವೀಕರಿಸಲು ಅವಕಾಶವನ್ನು ಕಲ್ಪಿಸಿರುವುದಿಲ್ಲ.<br><br>ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ನಿಗದಿತ ಅವಧಿಯಲ್ಲಿ ಸ್ವೀಕೃತಗೊಂಡ ಅರ್ಜಿಗಳಲ್ಲಿ ಹಕ್ಕು ಪತ್ರ ನೀಡಿದ ಬಾಕಿ ಅರ್ಜಿಗಳ ವಿವರಗಳು ಈ ಕೆಳಗಿನಂತಿವೆ: |

**ದಕ್ಷಿಣ ಕನ್ನಡ ಜಿಲ್ಲೆ:**

| ಕ್ರ.ಸಂ | ತಾಲೂಕು | ಹಕ್ಕುಪತ್ರ ವಿತರಣೆ | | ಹಕ್ಕುಪತ್ರ ವಿತರಣೆಗೆ ಬಾಕಿ (94ಸಿ) | ಬಾಕಿ ಅರ್ಜಿಗಳು (94ಸಿ) |
|---|---|---|---|---|---|
| | | 2023-24 (94ಸಿ) | 2024-25 (94ಸಿ) | | |
| 1 | ಮಂಗಳೂರು | 0 | 0 | 0 | 0 |
| 2 | ಬಂಟ್ವಾಳ | 0 | 140 | 31 | 28 |
| 3 | ಮೂಡಬಿದ್ರೆ | 57 | 238 | 195 | 61 |
| 4 | ಮುಲ್ಕಿ | 0 | 0 | 0 | 0 |
| 5 | ಉಳ್ಳಾಲ | 425 | 19 | 0 | 2 |
| 6 | ಕಡಬ | 502 | 458 | 0 | 90 |
| 7 | ಸುಳ್ಯ | 123 | 69 | 0 | 178 |
| 8 | ಪುತ್ತೂರು | 79 | 85 | 33 | 585 |
| 9 | ಬೆಳ್ತಂಗಡಿ | 63 | 46 | 0 | 703 |
| **ಒಟ್ಟು** | | **1249** | **1055** | **259** | **1647** |

| ಕ್ರ.ಸಂ | ತಾಲೂಕು | ಹಕ್ಕುಪತ್ರ ವಿತರಣೆ | | ಹಕ್ಕುಪತ್ರ ವಿತರಣೆಗೆ ಬಾಕಿ (94ಸಿಸಿ) | ಬಾಕಿ ಅರ್ಜಿಗಳು (94ಸಿಸಿ) |
|---|---|---|---|---|---|
| | | 2023-24 (94ಸಿಸಿ) | 2024-25 (94ಸಿಸಿ) | | |
| 1 | ಮಂಗಳೂರು | 9 | 60 | 0 | 0 |
| 2 | ಬಂಟ್ವಾಳ | 0 | 150 | 13 | 111 |
| 3 | ಮೂಡಬಿದ್ರೆ | 24 | 110 | 99 | 5 |
| 4 | ಮುಲ್ಕಿ | 3 | 1 | 0 | 0 |
| 5 | ಉಳ್ಳಾಲ | 19 | 58 | 0 | 7 |
| 6 | ಕಡಬ | 1 | 1 | 0 | 01 |
| 7 | ಸುಳ್ಯ | 9 | 4 | 0 | 0 |
| 8 | ಪುತ್ತೂರು | 12 | 6 | 12 | 90 |
| 9 | ಬೆಳ್ತಂಗಡಿ | 0 | 3 | 0 | 20 |
| **ಒಟ್ಟು** | | **77** | **393** | **124** | **234** |

**ಉಡುಪಿ ಜಿಲ್ಲೆ:**

ಸರಕಾರವು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 94 ಸಿ ಮತ್ತು 94 ಸಿಸಿ ರಡಿ ಅರ್ಜಿ ಸಲ್ಲಿಸಲು ದಿನಾಂಕ:31/03/2022 ರ ವರೆಗೆ ಕಾಲಾವಕಾಶವನ್ನು ನಿಗದಿಪಡಿಸಲಾಗಿತ್ತು. 2023 ರ ನಂತರ ಯಾವುದೇ ಅರ್ಜಿ ಸ್ವೀಕೃತವಾಗಿರುವುದಿಲ್ಲ. ವಿತರಿಸಿದ ಹಕ್ಕುಪತ್ರ ಮತ್ತು ಬಾಕಿ ಇರುವ ಅರ್ಜಿಗಳ ತಾಲೂಕುವಾರು ಅರ್ಜಿಗಳ ವಿವರ ಈ ಕೆಳಗಿನಂತಿರುತ್ತದೆ.

ನಮೂನೆ 94ಸಿ

| ಕ್ರ.ಸಂ | ತಾಲೂಕು | 2023 ರ ನಂತರ ಹಕ್ಕುಪತ್ರ ವಿತರಿಸಿದ ಅರ್ಜಿಗಳು. | ಬಾಕಿ ಅರ್ಜಿಗಳು |
|---|---|---|---|
| | ಉಡುಪಿ | 76 | 7 |
| | ಕುಂದಾಪುರ | 664 | 96 |
| | ಕಾರ್ಕಳ | 112 | 44 |
| | ಬ್ರಹ್ಮಾವರ | 221 | 62 |
| | ಬೈಂದೂರು | 113 | 269 |
| | ಕಾಪು | 23 | 29 |
| | ಹೆಬ್ರಿ | 0 | 59 |
| **ಒಟ್ಟು** | | **1209** | **566** |

ನಮೂನೆ 94ಸಿಸಿ

| ಕ್ರ.ಸಂ | ತಾಲೂಕು | 2023 ರ ನಂತರ ಹಕ್ಕುಪತ್ರ ವಿತರಿಸಿದ ಅರ್ಜಿಗಳು. | ಬಾಕಿ ಅರ್ಜಿಗಳು |
|---|---|---|---|
| | ಉಡುಪಿ | 62 | 13 |
| | ಕುಂದಾಪುರ | 0 | 0 |
| | ಕಾರ್ಕಳ | 103 | 27 |
| | ಬ್ರಹ್ಮಾವರ | 196 | 27 |
| | ಬೈಂದೂರು | 09 | 209 |
| | ಕಾಪು | 12 | 04 |
| | ಹೆಬ್ರಿ | 0 | 0 |
| **ಒಟ್ಟು** | | **382** | **280** |

**ಕಂಇ 278 ಎಂಆರ್‌ಆರ್ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

## ಅನುಬಂಧ-1

**2023ರ ನಂತರ ಇ-ಸ್ವತ್ತು ವರ್ಗೀಕರಣ ಪ್ರಕರಣ 94ಸಿ, 94ಸಿಸಿ ಹಾಗೂ 94ಡಿ ರಡಿಯಲ್ಲಿ ಸೃಜಿಸಿರುವ ನಮೂನೆ 9 ಮತ್ತು 11ಎ ವಿವರ**

| ಕ್ರ. ಸಂ. | ಜಿಲ್ಲೆಯ ಹೆಸರು | ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಸೆಕ್ಷನ್ 94ಸಿ/ 94ಸಿಸಿ/ 94ಡಿ ರಡಿಯಲ್ಲಿ ಮಂಜೂರಾದ ಆಸ್ತಿ ವರ್ಗೀಕರಣದಡಿ ಖಾತೆ ಸೃಜಿಸಲಾಗಿರುವ ಆಸ್ತಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 4881 |
| 2 | ಬಳ್ಳಾರಿ | 6406 |
| 3 | ಬೆಳಗಾವಿ | 2175 |
| 4 | ಬೆಂಗಳೂರು ಗ್ರಾಮಾಂತರ | 2158 |
| 5 | ಬೆಂಗಳೂರು | 2541 |
| 6 | ಬೆಂಗಳೂರು ದಕ್ಷಿಣ | 2972 |
| 7 | ಬೀದರ್ | 1424 |
| 8 | ಚಾಮರಾಜನಗರ | 509 |
| 9 | ಚಿಕ್ಕಬಳ್ಳಾಪುರ | 878 |
| 10 | ಚಿಕ್ಕಮಗಳೂರು | 5178 |
| 11 | ಚಿತ್ರದುರ್ಗ | 7272 |
| 12 | ದಕ್ಷಿಣ ಕನ್ನಡ | 12523 |
| 13 | ದಾವಣಗೆರೆ | 3097 |
| 14 | ಧಾರವಾಡ | 1294 |
| 15 | ಗದಗ | 1362 |
| 16 | ಹಾಸನ | 3713 |
| 17 | ಹಾವೇರಿ | 2776 |
| 18 | ಕಲಬುರಗಿ | 3618 |
| 19 | ಕೊಡಗು | 1109 |
| 20 | ಕೋಲಾರ | 692 |
| 21 | ಕೊಪ್ಪಳ | 2183 |
| 22 | ಮಂಡ್ಯ | 3148 |
| 23 | ಮೈಸೂರು | 4918 |
| 24 | ರಾಯಚೂರು | 5431 |
| 25 | ಶಿವಮೊಗ್ಗ | 4211 |
| 26 | ತುಮಕೂರು | 7858 |
| 27 | ಉಡುಪಿ | 1580 |
| 28 | ಉತ್ತರ ಕನ್ನಡ | 1422 |
| 29 | ವಿಜಯನಗರ | 14883 |
| 30 | ವಿಜಯಾಪುರ | 13001 |
| 31 | ಯಾದಗಿರಿ | 4577 |
| | **ಒಟ್ಟು** | **129790** |

| ಅನುಬಂಧ-2 | | |
|---|---|---|
| ಈಗಾಗಲೇ ಇ-ಸ್ವತ್ತು ವರ್ಗೀಕರಣ ಪ್ರಕರಣ 94ಸಿ, 94ಸಿಸಿ ಹಾಗೂ 94ಡಿ ರಡಿಯಲ್ಲಿ ಸೃಜಿಸಿರುವ ನಮೂನೆ 9 ಮತ್ತು 11ಎ ವಿವರ | | |
| ಕ್ರ. ಸಂ. | ಜಿಲ್ಲೆಯ ಹೆಸರು | ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಸೆಕ್ಷನ್ 94ಸಿ/ 94ಸಿಸಿ/ 94ಡಿ ರಡಿಯಲ್ಲಿ ಮಂಜೂರಾದ ಆಸ್ತಿ ವರ್ಗೀಕರಣದಡಿ ಖಾತೆ ಸೃಜಿಸಲಾಗಿರುವ ಆಸ್ತಿಗಳ ಸಂಖ್ಯೆ |
| 1 | ಬಾಗಲಕೋಟೆ | 5183 |
| 2 | ಕೊಪ್ಪಳ | 2236 |
| 3 | ಬಳ್ಳಾರಿ | 6492 |
| 4 | ಬೆಳಗಾವಿ | 2195 |
| 5 | ಬೆಂಗಳೂರು ಗ್ರಾಮಾಂತರ | 3107 |
| 6 | ಬೆಂಗಳೂರು | 4251 |
| 7 | ಬೆಂಗಳೂರು ದಕ್ಷಿಣ | 3491 |
| 8 | ಬೀದರ್ | 1663 |
| 9 | ಚಾಮರಾಜನಗರ | 525 |
| 10 | ಚಿಕ್ಕಬಳ್ಳಾಪುರ | 1083 |
| 11 | ಚಿಕ್ಕಮಗಳೂರು | 9047 |
| 12 | ಚಿತ್ರದುರ್ಗ | 7384 |
| 13 | ದಕ್ಷಿಣ ಕನ್ನಡ | 24732 |
| 14 | ದಾವಣಗೆರೆ | 3646 |
| 15 | ಧಾರವಾಡ | 1349 |
| 16 | ಗದಗ | 1395 |
| 17 | ಹಾಸನ | 4819 |
| 18 | ಹಾವೇರಿ | 2790 |
| 19 | ಕಲಬುರಗಿ | 3624 |
| 20 | ಕೊಡಗು | 2019 |
| 21 | ಕೋಲಾರ | 827 |
| 22 | ಮಂಡ್ಯ | 3160 |
| 23 | ಮೈಸೂರು | 5124 |
| 24 | ರಾಯಚೂರು | 5522 |
| 25 | ಶಿವಮೊಗ್ಗ | 7206 |
| 26 | ತುಮಕೂರು | 8345 |
| 27 | ಉಡುಪಿ | 2812 |
| 28 | ಉತ್ತರ ಕನ್ನಡ | 2187 |
| 29 | ವಿಜಯನಗರ | 14991 |
| 30 | ವಿಜಯಾಪುರ | 13017 |
| 31 | ಯಾದಗಿರಿ | 4578 |
| **ಒಟ್ಟು** | | **158800** |